# ಗೋಪೀಭಾವ



ಗೋಪಿಯರು ಶ್ರೀಕೃಷ್ಣನೊಡನೆ ಐಕ್ಯವಾಗಲು ಕಾತ್ಯಾಯನಿಯ ಪೂಜೆ ಮಾಡಿದರು. ಎಲ್ಲರೂ ಮಹಾಮಾಯೆ ಆದ್ಯಾಶಕ್ತಿಗೆ ಅಧೀನರು. ಅವತಾರಾದಿಗಳು ಕೂಡ ಮಾಯೆಯನ್ನು ಆಶ್ರಯಿಸಿ ತಮ್ಮ ಲೀಲೆಯನ್ನು ನಡೆಸುತ್ತಾರೆ. ಅದಕ್ಕಾಗಿಯೇ ಅವರು ಆದ್ಯಾಶಕ್ತಿಯನ್ನು ಪೂಜಿಸುವುದು.

*(ಭಾಗ ೧, ಪು.೧೮೭)*

ಗೋಪಿಯರದು ಪ್ರೇಮಾಭಕ್ತಿ, ಅವ್ಯಭಿಚಾರ ಭಕ್ತಿ, ನಿಷ್ಠಾಭಕ್ತಿ. ವ್ಯಭಿಚಾರ ಭಕ್ತಿ ಎಂಬುದು ಯಾವುದು ಗೊತ್ತೆ? ಜ್ಞಾನಮಿಶ್ರ ಭಕ್ತಿ. ಉದಾಹರಣೆಗೆ: 'ಕೃಷ್ಣನೇ ಎಲ್ಲವೂ ಆಗಿದ್ದಾನೆ. ಆತನೇ ಪರಬ್ರಹ್ಮ, ಆತನೇ ರಾಮ, ಆತನೇ ಶಿವ, ಆತನೇ ಶಕ್ತಿ' ಎಂಬ ಭಾವನೆ. ಆದರೆ ಜ್ಞಾನದ ಅಂಶ ಪ್ರೇಮಾಭಕ್ತಿಯಲ್ಲಿ ಮಿಶ್ರಿತವಾಗಿಲ್ಲ. *(ಭಾಗ ೧, ಪು.೧೯೦)*

ಪ್ರೇಮಾಭಕ್ತಿಯಲ್ಲಿ 'ಅಹಂಕಾರ', 'ಮಮಕಾರ' ಎರಡೂ ಇವೆ. ಯಶೋದೆ ಭಾವಿಸುತ್ತಿದ್ದಳು: 'ನಾನು ಗೋಪಾಲನ ಯೋಗಕ್ಷೇಮ ನೋಡಿಕೊಳ್ಳದಿದ್ದರೆ, ಬೇರೆ ಯಾರು ತಾನೆ ನೋಡಿಕೊಳ್ಳುತ್ತಿದ್ದರು? ನಾನು ನೋಡಿಕೊಳ್ಳದಿದ್ದರೆ ಅವನು ಕಾಯಿಲೆ ಬಿದ್ದು ಬಿಡುತ್ತಾನೆ.' ಶ್ರೀಕೃಷ್ಣ ಸಾಕ್ಷಾತ್ ಭಗವಂತ ಎಂಬ ಬೋಧೆ ಯಶೋದೆಗಿರಲಿಲ್ಲ. ಎರಡನೆಯದು 'ಮಮಕಾರ'. ಭಗವಂತ ತನ್ನವನು ಎಂದು ಭಾವಿಸುವುದು – 'ನನ್ನ ಗೋಪಾಲ' ಎಂದು ಭಾವಿಸುವಿಕೆ. ಉದ್ಧವ ಯಶೋದೆಗೆ ತಿಳಿಸಿದ: 'ತಾಯೆ, ನಿಮ್ಮ ಕೃಷ್ಣ ಸಾಕ್ಷಾತ್ ಭಗವಂತನೇ; ಜಗಚ್ಚಿಂತಾಮಣಿಯೇ. ಆತ ಸಾಮಾನ್ಯ ಮನುಷ್ಯನಲ್ಲ.' ಯಶೋದೆ ಹೇಳಿದಳು: 'ನೋಡಿಲ್ಲಿ, ನಾನು ಕೇಳಿದ್ದು ನಿಮ್ಮ ಚಿಂತಾಮಣಿಯ ವಿಷಯ ಅಲ್ಲ ; ನನ್ನ ಗೋಪಾಲ ಹೇಗಿದ್ದಾನೆ ಎಂಬುದಾಗಿ. ಚಿಂತಾಮಣಿಯನ್ನಲ್ಲ, ನನ್ನ ಗೋಪಾಲನನ್ನು.' *(ಭಾಗ ೧, ಪು.೧೯೧)*

ಗೋಪಿಯರದು ಎಂಥಾ ನಿಷ್ಠೆ! ಅವರು ಮಥುರೆಗೆ ಹೋಗಿ ದ್ವಾರಪಾಲಕನನ್ನು ಬಹಳವಾಗಿ ಬೇಡಿಕೊಂಡು ಸಭಾಮಂದಿರವನ್ನು ಪ್ರವೇಶಮಾಡಿದರು. ದ್ವಾರಪಾಲಕ ಅವರನ್ನು ಶ್ರೀಕೃಷ್ಣನ ಹತ್ತಿರಕ್ಕೆ ಕರೆದುಕೊಂಡು ಹೋದ. ಆದರೆ ಅಲ್ಲಿ ರುಮಾಲು ಸುತ್ತಿರುವ ಶ್ರೀಕೃಷ್ಣನನ್ನು ಕಂಡು, ತಲೆತಗ್ಗಿಸಿ ತಮ್ಮೊಳಗೇ ಮಾತಾಡಿಕೊಳ್ಳಲಾರಂಭಿಸಿದರು: 'ತಲೆಗೆ ರುಮಾಲು ಸುತ್ತಿಕುಳಿತಿದ್ದಾನಲ್ಲ, ಇವನಾರು? ಈತನೊಡನೆ ಮಾತುಕತೆಯಾಡಿ ಕೊನೆಗೆ ನಾವು ಶ್ರೀಕೃಷ್ಣನಲ್ಲಿಟ್ಟಿರುವ ನಿಷ್ಠಾಭಕ್ತಿಯನ್ನು ಕಳೆದುಕೊಳ್ಳೋಣವೆ? ಪೀತಾಂಬರಧಾರಿಯಾದ, ನವಿಲುಗರಿಯ ಕಿರೀಟ ಧರಿಸಿರುವ ನಮ್ಮ ಪ್ರಾಣವಲ್ಲಭ ಶ್ರೀಕೃಷ್ಣನೆಲ್ಲಿ?'

*(ಭಾಗ ೧, ಪು.೧೯೧)*

ನೋಡಿದಿರೋ, ಗೋಪಿಯರ ನಿಷ್ಠೆ ಎಷ್ಟು ಅದ್ಭುತವಾದ್ದು! ಬೃಂದಾವನದವರ ಭಾವ ಬಹಳ ವಿಶೇಷವಾದ್ದು. ಕೇಳಿದ್ದೇನೆ, ದ್ವಾರಕೆಯ ಜನರು ಅರ್ಜುನನ ಸಖನಾದ ಶ್ರೀಕೃಷ್ಣನನ್ನು ಮಾತ್ರ ಪೂಜಿಸುತ್ತಾರೆ, ರಾಧೆಯನ್ನು ತಿರಸ್ಕರಿಸುತ್ತಾರೆ ಎಂಬುದಾಗಿ.

*(ಭಾಗ ೧, ಪು.೧೯೧)*

ಕೆಲವರು ಹೇಳುತ್ತಾರೆ, ಯಶೋದಾದಿ ಗೋಪಿಯರು ಹಿಂದಿನ ಜನ್ಮಗಳಲ್ಲಿ ನಿರಾಕಾರವಾದಿಗಳಾಗಿದ್ದರು; ಅದರಿಂದ ಅವರಿಗೆ ತೃಪ್ತಿ ದೊರೆಯಲಿಲ್ಲ; ಅದಕ್ಕಾಗಿಯೇ ಬೃಂದಾವನ ಲೀಲೆಯಲ್ಲಿ ಶ್ರೀಕೃಷ್ಣನೊಡನೆ ಬಹಳವಾಗಿ ಆನಂದಪಟ್ಟರು ಎಂದು. *(ಭಾಗ ೧, ಪು.೩೫೮)*

ಒಂದು ಹೇಳಿಕೆ ಇದೆ, ಭಗವಂತನಿಗಿಂತ ಭಕ್ತ ದೊಡ್ಡವನು ಎಂದು. ಏಕೆಂದರೆ ಭಕ್ತ ಭಗವಂತನನ್ನು ತನ್ನ ಹೃದಯದಲ್ಲಿ ಇಟ್ಟುಕೊಂಡು ಸುತ್ತಾಡುತ್ತಾನೆ. ವೈಷ್ಣವ ಶಾಸ್ತ್ರದಲ್ಲಿ ಹೇಳಿದೆ: 'ಭಕ್ತ ಭಾವಿಸುತ್ತಾನೆ. ತಾನು ದೊಡ್ಡವನು ಭಗವಂತ ಚಿಕ್ಕವನು ಎಂಬುದಾಗಿ.' ಯಶೋದೆ ಕೃಷ್ಣನನ್ನು ಹಗ್ಗದಿಂದ ಕಟ್ಟಿಹಾಕಲು ಪ್ರಯತ್ನಿಸಿದಳು. ಆಕೆ ನಂಬಿದ್ದಳು, ತಾನಲ್ಲದೆ ಬೇರೆ ಯಾರೂ ಕೃಷ್ಣನ ಯೋಗಕ್ಷೇಮ ನೋಡಿಕೊಳ್ಳಲಾರರು ಎಂದು.

*(ಭಾಗ ೧, ಪು.೫೧೦)*

ಶ್ರೀಕೃಷ್ಣನ ತಲೆಯ ಮೇಲೆ ನವಿಲಿನ ಗರಿ ಇದೆ. ಆ ಗರಿಯಲ್ಲಿ ಯೋನಿಯ ಚಿಹ್ನೆ ಇದೆ — ಅಂದರೆ ಶ್ರೀಕೃಷ್ಣ ಪ್ರಕೃತಿಯನ್ನು ತನ್ನ ತಲೆಯ ಮೇಲೆ ಹೊತ್ತುಕೊಂಡಿದ್ದಾನೆ ಎಂದರ್ಥವಾಗುತ್ತದೆ. ಶ್ರೀಕೃಷ್ಣ ರಾಸಮಂಡಲಿಗೆ ಹೋದ. ಆದರೆ, ಅಲ್ಲಿ ತಾನೇ ಪ್ರಕೃತಿಯಾದ. ಅದಕ್ಕಾಗಿಯೆ ನೋಡು, ರಾಸಮಂಡಲಿಯಲ್ಲಿ ಆತ ಹೆಂಗಸಿನ ವೇಷವನ್ನು ಧರಿಸಿರುವುದು. ಪ್ರಕೃತಿ ಭಾವೋಪಪನ್ನನಾಗದೆ ಇದ್ದರೆ, ಪ್ರಕೃತಿಯ ಸಂಗದ ಅಧಿಕಾರಿಯಾಗಲಾರ. ಪ್ರಕೃತಿಭಾವ ಸಂಪನ್ನನಾದರೆ ಆಗ ಕ್ರೀಡೆ, ಆಗ ಆನಂದ. *(ಭಾಗ ೨, ಪು.೭೦)*

**ಶ್ರೀರಾಮಕೃಷ್ಣ ವಚನವೇದದಿಂದ**